**ಸಿಸಿ ನಂಬರಃ 3024/2024**

**ಸಾಕ್ಷಿಃ ಪಿ.ಡಬ್ಲ್ಯೂಃ 1**

**(ಇಂದು ತಾಃ 14–11–2025 ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.)**

**(ಸಾಕ್ಷಿಯ ಸ್ವಪ್ರಮಾಣೀಕೃತ ಹೇಳಿಕೆಯನ್ನು ಮುಖ್ಯ ವಿಚಾರಣೆಯಾಗಿ ಪರಿಗಣಿಸಲಾಗಿರುತ್ತದೆ)**

**ಪಾಟೀ ಸವಾಲುಃ ಆರೋಪಿ ಪರ ಶ್ರೀ ಎಂ.ಟಿ.ಎನ್. ವಕೀಲರಿಂದ,**

ನಾನು ಕಳೆದ 3 ವರ್ಷಗಳಿಂದ ಫಿರ್ಯಾದಿ ಸೊಸೈಟಿಯಲ್ಲಿ ವ್ಯವಸ್ಥಾಪಕನಾಗಿ ಕೆಲಸ ಮಾಡುತ್ತಿದ್ದೇನೆ. ಆರೋಪಿ ದೂರಿನಲ್ಲಿ ಹೇಳಿದ ಸಾಲಕ್ಕಿಂತ ಹೇಳಿದ ಪೂರ್ವದಲ್ಲಿ ಬೇರೆ ಸಾಲ ಮಾಡಿರುವುದಿಲ್ಲ. ಅದೇ ರೀತಿ ಬೇರೆಯವರ ಸಾಲಕ್ಕೆ ಜಾಮೀನುದಾರನಾಗಿರುವುದಿಲ್ಲ. ದೂರಿನಲ್ಲಿ ಹೇಳಿದ ಸಾಲವನ್ನು ಆರೋಪಿಗೆ ನೀಡಿದ ಸಂದರ್ಭದಲ್ಲಿ ಫಿರ್ಯಾದಿ ಸೊಸೈಟಿಯ ವ್ಯವಸ್ಥಾಪಕನಾಗಿರಲಿಲ್ಲ, ಆದರೆ ಫಿರ್ಯಾದಿ ಸೊಸೈಟಿಯಲ್ಲಿ ಕೆಲಸ ಮಾಡುತ್ತಿದ್ದೆನು.

2. ಫಿರ್ಯಾದಿ ಸೊಸೈಟಿಯಲ್ಲಿ ಯಾವುದೇ ಸಾಲ ಮಂಜೂರಿ ಮಾಡಬೇಕಾದರೆ, ನಿರ್ದೇಶಕರ ಮಂಡಳಿಯ ಒಪ್ಪಿಗೆ ಬೇಕಾಗಿರುತ್ತದೆ. ಅದೇ ರೀತಿ ಸಾಲ ಮಂಜೂರಿ ಮಾಡಿದ ಠರಾವಿನ ಬಗ್ಗೆ ಸಾಲದ ಅರ್ಜಿಯಲ್ಲಿ ನಮೂದು ಮಾಡುತ್ತಾರೆ ಎಂದರೆ ಸರಿ. ಆರೋಪಿಗೆ ಸಾಲ ಮಂಜೂರಿ ಮಾಡುವ ಬಗ್ಗೆ ನಿರ್ದೇಶಕರ ಮಂಡಳಿಯಲ್ಲಿ ಠರಾವು ಆದ ಬಗ್ಗೆ ದಾಖಲಾತಿ ಹಾಜರುಪಡಿಸಿರುವುದಿಲ್ಲ. ಅದನ್ನು ಹಾಜರುಪಡಿಸಲು ಯಾವುದೇ ತೊಂದರೆ ಇರುವುದಿಲ್ಲ. ಆರೋಪಿಗೆ ನೀಡಿದ ಸಾಲದ ಹಣದಲ್ಲಿ ಇಪ್ಪತ್ತೈದು ಸಾವಿರ ರೂಪಾಯಿಗಳನ್ನು ಕಡಿತ ಮಾಡಿರುತ್ತೇವೆ ಎಂದರೆ ಸರಿಯಲ್ಲ. ಹದಿನೈದು ಸಾವಿರ ರೂಪಾಯಿ ನಿಶ್ಚಿತ ಠೇವಣಿ ಮೊತ್ತ ಮತ್ತು ಐದು ಸಾವಿರ ರೂಪಾಯಿ ಷೇರು ಮೊತ್ತವನ್ನು ಕಡಿತ ಮಾಡಿರುತ್ತೇವೆ. ನಿಶ್ಚಿತ ಠೇವಣಿಯ ಮೊತ್ತ ಈಗಲೂ ಚಾಲ್ತಿಯಲ್ಲಿರುತ್ತದೆ ಎಂದರೆ, ಸಾಕ್ಷಿಯು ನಿಶ್ಚಿತ ಠೇವಣಿ ಮೊತ್ತವನ್ನು ಸಾಲದ ಖಾತೆಗೆ ಜಮಾ ಮಾಡಿರುತ್ತೇವೆ ಎಂದು ಉತ್ತರಿಸಿರುತ್ತಾರೆ. ಆ ರೀತಿ ಜಮಾ ಮಾಡಲು ಆರೋಪಿಯ ಒಪ್ಪಿಗೆ ಪಡೆದಿರುತ್ತೇವೆ. ಆ ಬಗ್ಗೆ ರಶೀದಿಯಲ್ಲಿ ಸಹಿ ಪಡೆದಿರುತ್ತೇವೆ.

3. ದೂರಿನಲ್ಲಿ ಹೇಳಿದ ಸಾಲ ಕಂತುಗಳ ಸಾಲ ಆಗಿರುವುದಿಲ್ಲ. ಅದು ಒಂದು ವರ್ಷದ ಅವಧಿಯ ಸಾಲವಾಗಿರುತ್ತದೆ. ಆರೋಪಿ ಸಾಲ ಪಡೆದ ನಂತರ ಯಾವುದೇ ಮೊತ್ತವನ್ನು ಸಾಲದ ಖಾತೆಗೆ ಪಾವತಿಸಿರುವುದಿಲ್ಲ. ಈ ಮೇಲೆ ಹೇಳಿದ ನಿಶ್ಚಿತ ಠೇವಣಿಯ ಮೊತ್ತವನ್ನು ಸಾಲದ ಖಾತೆಗೆ ಪಾವತಿ ಮಾಡಿರುತ್ತೇವೆ.

**ಮುಂದುವರೆದ ಪಾಟೀ ಸವಾಲಿಗೆ ಆರೋಪಿ ಪರ ವಕೀಲರು ಕಾಲಾವಕಾಶ ಕೋರಿದ್ದರಿಂದ ಮುಂದೂಡಲಾಯಿತು.**

**(ನನ್ನ ಹೇಳಿಕೆ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)**

**ಓ.ಹೇ.ಕೇ. ಸರಿ ಇದೆ.**

**ಸಹಿ ಇದೆ.**

**ಹೆಚ್ಚುವರಿ ನ್ಯಾ.ದಂ., ಭಟ್ಕಳ.**